

# ಹರಾಜು

ಎಂ. ನಾಗರಾಜ ಶೆಟ್ಟಿ

ಕಾಡುತ್ತಿವೆ ಭೂತಕಾಲದ ಭ್ರೂಣಗೂಢಗಳು
ಹುಗಿದ ಹಳಬಾವಿಯೊಳ ಕತ್ತಲ ಹಳಸು ಗಾಳಿ
—ಎಂ. ಗೋಪಾಲಕೃಷ್ಣ ಅಡಿಗ

ರಂಗಸ್ವಾಮಿ ಐದೂವರೆಗೆ ಮನೆಯಿಂದ ಹೊರಟು ನಿಧಾನವಾಗಿ ನಡೆದು ಇಪ್ಪತ್ತು ನಿಮಿಷದಲ್ಲಿ ಜೆಪಿ ಪಾರ್ಕ್ ತಲಪುತ್ತಾರೆ. ದೇಹ ಸಕ್ಕರೆ ಮೂಟೆಯಾದ್ದರಿಂದ ಡಯಬಿಟೀಶಿಯನ್ ವಾಕ್ ಮಾಡಬೇಕೆಂದು ಸಲಹೆ ನೀಡಿದ್ದರೆ, ಕಾಲುಗಂಟುಗಳು ನೋವಿದ್ದ ಕಾರಣಕ್ಕೆ ಆರ್ಥೋಪಿಡಿಶಿಯನ್ ನಡೆಯಬೇಡಿ ಅಂದಿದ್ದರು. ಅವರಿಬ್ಬರಿಗೂ ನೆಮ್ಮದಿ ಸಿಗಲಿ ಎಂದು ಸ್ವಲ್ಪ ಹೊತ್ತು ನಡೆದು ಕಲ್ಲು ಬೆಂಚಿನ ಮೇಲೆ ಆಸೀನರಾಗುತ್ತಾರೆ. ಸ್ವಲ್ಪ ತಡವಾಗಿ ಬರುವ ನಾಗೇಂದ್ರಪ್ಪ ಅವರಿಗೆ ನಮಸ್ಕರಿಸಿ, ಪಾರ್ಕಿನಲ್ಲಿ ಎರಡು ಸುತ್ತು ಬಂದು ಪಕ್ಕದಲ್ಲಿ ಕೂರುತ್ತಾರೆ.

ರಂಗಸ್ವಾಮಿಗಿಂತ ಮೂರು ವರ್ಷ ಚಿಕ್ಕವರಾದ ನಾಗೇಂದ್ರಪ್ಪನಿಗೆ ಯುವಕನಂತೆ ಕಾಣುವಾಸೆ. ಅಳಿದುಳಿದ ಕೂದಲಿಗೆ, ಮೀಸೆಗೆ ಹದಿನೈದು ದಿನಕ್ಕೊಮ್ಮೆ ತಪ್ಪದೆ ಬಣ್ಣ ಹಚ್ಚಿ, ತಾನು ಕೆಲಸ ಮಾಡಿದ, ಪರಿಚಿತರಿರುವ ಬ್ಯಾಂಕಿಗೆ ಅಂಡಲೆದು ‘ನಿಮಗೆ ವಯಸ್ಸಾಗಿದ್ದೇ ಗೊತ್ತಾಗುವುದಿಲ್ಲ’ ಎಂದು– ಮುಖ್ಯವಾಗಿ ಲೇಡೀಸ್– ಹೇಳಿದರೆ ಖುಷಿಯೋ ಖುಷಿ. ಅದನ್ನು ರಂಗಸ್ವಾಮಿಗೆ ಹೇಳುವವರೆಗೆ ನೆಮ್ಮದಿಯಿಲ್ಲ. ಇಬ್ಬರೂ ಆಗಾಗ್ಗೆ ನಮ್ಮ ಕಾಲವೇ ಚೆನ್ನಾಗಿತ್ತು ಎಂದು ಹಿಂದಿನದನ್ನು ನೆನಪಿಸಿಕೊಂಡು ಕೊರಗುವುದುಂಟು.

ಬೋಳು ಮಂಡೆಯ ರಂಗಸ್ವಾಮಿ ಕಾರಣವಿಲ್ಲದೆ ಬ್ಯಾಂಕಿಗೆ ಹೋಗುವವರಲ್ಲ. ಪೆನ್ಷನ್‌ಗೂ ಹೋಗದೆ, ಎಟಿಎಂನಲ್ಲೇ ಹಣ ತೆಗೆಯುತ್ತಿದ್ದರು. ಬದುಕಿದ್ದಕ್ಕೆ ಸಾಕ್ಷಿಯಾಗಿ ಲೈಫ್ ಸರ್ಟಿಫಿಕೇಟ್ ನೀಡಲು ಮತ್ತು ಇನ್‌ಕಂ ಟ್ಯಾಕ್ಸ್ ರಿಟರ್ನ್ಸ್‌ಗೆ ಟಿಡಿಎಸ್ ಪತ್ರ ಪಡೆಯಲು ಬ್ಯಾಂಕಿನ ಹೊಸಿಲು ಮೆಟ್ಟುತ್ತಿದ್ದರು.

‘ಬ್ಯಾಂಕಿಗೆ ಸುಮ್ನೆ ಯಾಕೆ ಹೋಗ್ತೀರಿ, ನಮ್ಮನ್ನು ಅವ್ರು ಕ್ಯಾರ್ ಮಾಡೊಲ್ಲ’ ಎಂದು ರಂಗಸ್ವಾಮಿ ಬೇಸರದಿಂದ ಹೇಳುವುದಿದೆ. ಆದರೆ ನಾಗೇಂದ್ರಪ್ಪನಿಗೆ ವಾರಕ್ಕೊಮ್ಮೆಯಾದರೂ ಬ್ಯಾಂಕಿಗೆ ಹೋಗದಿದ್ದರೆ ತಿಂದ ಅನ್ನ ಅರಗುವುದಿಲ್ಲ.

ನಾಗೇಂದ್ರಪ್ಪ ರಂಗಸ್ವಾಮಿಯ ಪಕ್ಕದಲ್ಲಿ ಕುಳಿತು ಉಸ್ಸಪ್ಪಾ ಎಂದು ದೀರ್ಘ ಉಸಿರು ಬಿಟ್ಟರು. ಅರುವತ್ತಾರರ ಯುವಕನಿಗೆ ಇಂದೇನಾಯಿತು ಎಂದು ಅಚ್ಚರಿಯಿಂದ ರಂಗಸ್ವಾಮಿ ‘ಏನು ಸುಸ್ತಾಯಿತಾ?’ ಎಂದು ವಿಚಾರಿಸಿದರು.

ನಾಗೇಂದ್ರಪ್ಪ ಸ್ವಲ್ಪ ತಡೆದು, ‘ಇಂದಿರಾನಗರ ಬ್ರಾಂಚಿಗೆ ಹೋಗಿದ್ದೆ’ ಎಂದರು. ಮಾತಲ್ಲಿ ಕಹಿಯಿತ್ತು.

ನಾಗೇಂದ್ರಪ್ಪನ ಮನೆಯಿಂದ ಇಂದಿರಾನಗರ ಬ್ರಾಂಚ್ ತುಂಬಾ ದೂರ. ಬಸ್ಸಲ್ಲಿ ಅಥವಾ ಆಟೋದಲ್ಲಿ ಹೋಗಬೇಕು. ಅಷ್ಟು ದೂರ ಹೋಗಿದ್ದಕ್ಕೆ ಆಯಾಸವಾಗಿರಬೇಕು ಎಂದು ರಂಗಸ್ವಾಮಿ ಯೋಚಿಸುತ್ತಿದ್ದಂತೆ ನಾಗೇಂದ್ರಪ್ಪ ‘ಜನ ಸರಿಯಿಲ್ಲ’ ಎಂದರು.

‘ಯಾರು?’ ಕೇಳಿದರು ರಂಗಸ್ವಾಮಿ.

* * *

ಸಂಜೆ ಏಳು ಗಂಟೆಯ ಸುಮಾರಿಗೆ ಹಡಗಲಿ ಬ್ಯಾಂಕ್ ಮ್ಯಾನೇಜರ್ ಕೆಲಸ ಮುಗಿಸಿ ಮನೆಗೆ ತೆರಳುವ ಹೊತ್ತಲ್ಲಿ ಇಟಗಿ ಬ್ರಾಂಚಿನಿಂದ ಫೋನ್ ಬಂದಿತ್ತು.

‘ಸಾವಿತ್ರಮ್ಮ ಎನ್ನುವವರ ಅಕೌಂಟಿಗೆ ಬೆಳಿಗ್ಗೆ ನಿಮ್ಮ ಬ್ರಾಂಚಿನಿಂದ ಹದಿನಾಲ್ಕು ಸಾವಿರ ಜಮಾ ಆಗಿದೆ. ಆ ಹಣದಿಂದ ಜ್ಯುಯೆಲ್ ಲೋನ್ ಕಟ್ಟಿದ್ದಾರೆ. ಕಳಿಸಿದ ಹಣ ಸಂಜೆ ರಿವರ್ಸ್ ಆಗಿದೆ. ಚೆಕ್ ಮಾಡಿ’ ಎಂದು ಬ್ರಾಂಚ್ ಮ್ಯಾನೇಜರ್ ಹೇಳಿದರು.

ಕ್ಲೋಸ್ ಮಾಡಿದ್ದ ಸಿಸ್ಟಮ್ ಅನ್ನು ಮರು ಓಪನ್ ಮಾಡಿ ಕೂಲಂಕಷವಾಗಿ ಪರಿಶೀಲಿಸಿದಾಗ, ಬೆಳಿಗ್ಗೆ ಇಟಗಿ ಬ್ರಾಂಚಿಗೆ ಟ್ರಾನ್ಸ್‌ಫರ್ ಆಗಿದ್ದು, ಮತ್ತದೇ ಮೊತ್ತ ರಿವರ್ಸ್ ಮಾಡಿದ್ದು ತಿಳಿಯಿತು. ಸಂಬಂಧಪಟ್ಟ ಸ್ಲಿಪ್‌ಗಳು ಇರಲಿಲ್ಲ. ಇವೆರಡು ಟ್ರಾನ್ಸಾಕ್ಷನ್‌ಗಳನ್ನು ಮಾಡಿದ್ದ ಮಾದಗೋಪಾಲ ದಿನದ ಕೆಲಸ ಮುಗಿಸಿ ಹೊರಟು ಹೋಗಿದ್ದ. ಆತನನ್ನು ಕರೆಸಿ ಏನಾಗಿದೆಯೆಂದು ಕೇಳದೆ ಮ್ಯಾನೇಜರ್ ನೇರವಾಗಿ ಪ್ರಾದೇಶಿಕ ಕಚೇರಿಗೆ ರಿಪೋರ್ಟ್ ಮಾಡಿದ್ದರು.

ಹದಿಮೂರು ತಿಂಗಳ ಹಿಂದೆ ಬ್ಯಾಂಕಿಗೆ ಸೇರಿದ್ದ ಮಾದಗೋಪಾಲ ಕೆಲಸದಲ್ಲಿ ಚುರುಕು. ಕಂಪ್ಯೂಟರ್‌ನಲ್ಲಿ ತರಬೇತಿ ಇದ್ದ ಕಾರಣ ಸುಲಭದಲ್ಲಿ ಗ್ರಹಿಸಿ, ಎಲ್ಲರಿಗಿಂತ ವೇಗವಾಗಿ ಕೆಲಸ ಮಾಡುತ್ತಿದ್ದ. ಪ್ರೊಬೇಷನರಿ ಅವಧಿಯಲ್ಲಿ ಮ್ಯಾನೇಜರರ ಆಣತಿಯಂತೆ ರಾತ್ರಿ ಎಂಟು ಒಂಬತ್ತರವರೆಗೆ ಕೂತು ಕೆಲಸ ಮಾಡುತ್ತಿದ್ದ ಆತ, ಕಾಯಂ ಆದ ನಂತರ ಸಮಯ ಮೀರಿ ಇರುತ್ತಿರಲಿಲ್ಲ.

ಒಮ್ಮೆ ಮ್ಯಾನೇಜರ್ ಹೆಚ್ಚು ಹೊತ್ತು ಇರಬೇಕು ಎಂದಿದ್ದಕ್ಕೆ ಏನಿದ್ದರೂ ಕೆಲಸದ ಅವಧಿಯಲ್ಲಿ ಹೇಳಿ ಎಂದಿದ್ದ. ತಾನು ಸಾಕಿದ್ದು ತನ್ನನ್ನೇ ಕಚ್ಚುವಂತಾಗಿದೆಯೆಂದು ಮ್ಯಾನೇಜರ್‌ಗೆ ಸಿಟ್ಟಿತ್ತು. ತಕ್ಕ ಪಾಠ ಕಲಿಸಲು ಕಾಯುತ್ತಿದ್ದ ಅವರಿಗೆ ಒಳ್ಳೆ ಅವಕಾಶ ದೊರಕಿತ್ತು. ಇಂತಹ ವಿಷಯದಲ್ಲಿ ಬಹಳ ಚುರುಕಾಗಿರುವ ಪ್ರಾದೇಶಿಕ ಕಚೇರಿಯವರು ಮಾರನೇ ದಿನವೇ ಕ್ರಮವತ್ತಾಗಿ ಸಸ್ಪೆನ್ಷನ್ ಆರ್ಡರ್ ರವಾನಿಸಿದರು.

ಮಾದಗೋಪಾಲ ದಿಕ್ಕುತಪ್ಪಿದಂತಾಗಿದ್ದ. ಸಾವಿತ್ರಮ್ಮನ ಖಾತೆಗೆ ಹಣ ತುಂಬಿದರೂ ಶಿಕ್ಷೆಯಿಂದ ಪಾರಾಗಲು ಆಗುತ್ತಿರಲಿಲ್ಲ.